# ಮುಟ್ಟಬಾರದ ಹುಡುಗ

**ಕಾವ್ಯಾ ಕಡಮೆ**

ಕಲೆ: ವೆಂಕಟ್ರಮಣ ಭಟ್

ಸ್ಪರ್ಶವೆನ್ನುವುದು ದೊಡ್ಡವರ ಭಾಷೆ. ಎಂಟು–ಒಂಬತ್ತರ ಆ ಚಿಕ್ಕ ವಯಸ್ಸಿನಲ್ಲಿ ನನಗೆ ಸದಾನನ್ನು ಒಮ್ಮೆಯೂ ಮುಟ್ಟಬೇಕು ಅನ್ನಿಸಿದ್ದಿಲ್ಲ. ನಾವಿಬ್ಬರೂ ಬಾಗಾಯತದ ಅಂಚಿಗೆ ಎಲ್ಲಿಯೂ ಸಲ್ಲದಂತೆ ನಿಂತ ಕಲ್ಲು ಪಾಗಾರದ ಮೇಲೆ ಕಾಲಾಡಿಸುತ್ತ, ಒಂದಕ್ಕೊಂದು ಸಂಬಂಧವೇ ಇರದ ಮಾತುಗಳನ್ನು ಆಡುತ್ತ ಕುಳಿತೆವೆಂದರೆ ಗಂಟೆಗಳು ಸರಿದಿದ್ದೇ ತಿಳಿಯುತ್ತಿರಲಿಲ್ಲ. ಸುಗಂಧಿ ಮಾಮಿ ಹಿತ್ತಿಲ ಬಾಗಿಲ ಬಳಿ ನಿಂತು, "ವಿಶೂ ಮರೀ..." ಎಂದು ಊಟಕ್ಕೆ ಕೂಗು ಹಾಕಿದಾಗಲೇ ನನಗೆ ಮತ್ತೆ ಈ ಲೋಕದ ಧ್ಯಾನ.

ಪುನಃ ಮನೆಯೆಡೆಗೆ ಹೆಜ್ಜೆ ಹಾಕುವಾಗ ಸದಾ ನನಗಿಂತ ಒಂದು ಮಾರು ಹಿಂದೆಯೇ ನಡೆದು ಬರುತ್ತಿದ್ದ. ನಾನು ಮಾಮಿಯೊಟ್ಟಿಗೆ ಹಿತ್ತಿಲ ಬಾಗಿಲಿಂದ ಮನೆಯೊಳಗೆ ಹೋದರೆ, ಸದಾ ಮಾಮಿ ಕೊಟ್ಟ ಜಿಲೇಬಿಯನ್ನೋ, ಅತ್ರಾಸವನ್ನೋ ಚಡ್ಡಿಯ ಜೇಬಿಗೆ ಸೇರಿಸುತ್ತ ತೋರುಬೆರಳು ಮತ್ತು ಹೆಬ್ಬೆರಳುಗಳನ್ನಷ್ಟೇ ಒಮ್ಮೆ ನೆಕ್ಕಿದಂತೆ ಮಾಡಿ ಅರ್ಧಚಂದ್ರಾಕೃತಿಯಲ್ಲಿ ಮನೆಗೊಮ್ಮೆ ಸುತ್ತು ಹಾಕಿ ಮುಂಬಾಗಿಲ ಹಜಾರದ ಎಡಕ್ಕಿದ್ದ ಕೋಣೆಯ ಕತ್ತಲಲ್ಲಿ ಅಂತರ್ಧಾನವಾಗುತ್ತಿದ್ದ. ಅವನು ಹಾಗೆಲ್ಲ ಒಮ್ಮೆಯೂ, ತಪ್ಪಿಯೂ ಮನೆಯೊಳಗೆ ಸುಳಿದಿದ್ದೇ ಇಲ್ಲ.

ಸದಾ, ನಮ್ಮಮ್ಮನ ಎರಡನೆಯ ಅಣ್ಣನಾದ ಚಂದು ಮಾಮನ ಮಗ. ಚಂದೂ ಮಾಮ ಈಗಿಲ್ಲ. ಮೂರೇ ತಿಂಗಳ ಹಿಂದೆ ಹೃದಯ ಸ್ತಂಭನದಿಂದ ಅವ ತೀರಿಹೋಗಿದ್ದಾನೆ. ಪೇಟೆಯಲ್ಲಿ ಅವನೊಡನೆ ಸಂಸಾರ ಮಾಡಿಕೊಂಡಿದ್ದ ಮೆಹರುನ್ನೀಸಾ ಎಂಬ ಹೆಂಗಸು ಮತ್ತವರ ಮಗ ಸದಾ ಅಜ್ಜಿಯ ಮನೆಯಲ್ಲೇ ಪ್ರತ್ಯೇಕವಾಗಿರುವ ಕೋಣೆಯಲ್ಲಿ ಉಳಿದುಕೊಂಡಿದ್ದಾರೆ. "ಏನು ಮಾಡೋದು ತಂಗಿ, ಗತಿಯಿಲ್ಲ ಅಂತ ಕಾಲಿಗೆ ಬಂದು ಬಿತ್ತು ಅದು, ಅದಕ್ಕೇ ಮನೆಯೊಳಗೆ ಹೊಕ್ಕಿಸಿಕೊಳ್ಳಲೇಬೇಕಾಯ್ತು" ಅಂತ ಅಜ್ಜಿ ಅಮ್ಮನ ಬಳಿ ಹೇಳುತ್ತಿದ್ದುದನ್ನು ನಾನು ಕೇಳಿಸಿಕೊಂಡಿದ್ದೆ.

ಪ್ರತಿ ವರ್ಷ ಬೇಸಿಗೆಯಲ್ಲಿ ಎರಡು ತಿಂಗಳು, ಅಕ್ಟೋಬರಿನಲ್ಲಿ ಎರಡು ವಾರ ನಾನು ಯಲ್ಲಾಪುರದ ಅರ್ತಿಬೈಲ್‌ನಲ್ಲಿರುವ ಈ ಅಜ್ಜಿಯ ಮನೆಯಲ್ಲಿ ಕಳೆಯುತ್ತಿದ್ದೆ. ಊರಹೆಂಚು ಹೊದಿಸಿದ ನಾಲ್ಕು ಕೋಣೆಗಳ ವಿಶಾಲ ಮನೆಯದು. ಒಳಹೊಕ್ಕ ತಕ್ಷಣ ಅಟ್ಟದ ಮೇಲೊಂದು ಕೋಣೆ. ಅದು ಚಂದು ಮಾಮನದು. ಕೆಳಗಿರುವ ಎರಡು ಕೋಣೆಗಳಲ್ಲಿ ಬಾಗಿಲಿದ್ದಿದ್ದು ಅಶೋಕ ಮಾಮಾ–ಸುಗಂಧಿ